ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 8-20
©*IIMRD*, Mysuru

IIMRD JOURNALS
www.iimrd.com

# ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿ

**ಡಾ. ಮಂಜು ಎನ್.ಡಿ**[1]

ಪೀಠಿಕೆ:

ಪರಿವರ್ತನೆ ಜಗದ ನಿಯಮ ಈ ನಿಯಮದ ಉಲ್ಲಂಘನೆ ಅಸಾಧ್ಯವಾದುದಾಗಿದ್ದು, ಜೀವನ ಹಾಗೂ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಪ್ರತಿಕ್ಷಣವೂ ಸಹ ಒಂದಲ್ಲ ಒಂದು ರೂಪದಲ್ಲಿ ಪರಿವರ್ತನೆ ನಡೆಯುತ್ತಿರುತ್ತದೆ. ಯಾವುದೇ ಒಂದು ಸಮಾಜ ನಿಂತ ನೀರಿನಂತೆ ಇರುವುದಿಲ್ಲ. ಅದು ಸದಾ ಬದಲಾವಣೆಯಾಗುತ್ತಿರುತ್ತದೆ ಆದ್ದರಿಂದ ಬದಲಾವಣೆ ಪ್ರಕೃತಿ ನಿಯಮ ಎನ್ನಬಹುದು. ಆದ್ದರಿಂದ ನಮಗೆ ಬೇಕಾಗಿರಲಿ ಅಥವಾ ಬೇಡವಾಗಿರಲಿ ನಾವು ಪ್ರೀತಿಸಲಿ ಅಥವಾ ದ್ವೇಷಿಸಲಿ ಬದಲಾವಣೆ ಉಂಟಾಗುತ್ತದೆ ಎಂಬುದು ನಮಗೆ ತಿಳಿದಿದೆ. ಅಂದರೆ ಯಾರು ಬದಲಾವಣೆಗಳನ್ನು ಸಂಪೂರ್ಣವಾಗಿ ಅಥವಾ ಶಾಶ್ವತವಾಗಿ ತಡೆಯಲು ಸಾಧ್ಯವಿಲ್ಲ. ಮನುಷ್ಯನು ತನ್ನ ವಿವೇಕವನ್ನು ಬಳಸಿ ಬದಲಾವಣೆಯ ದಿಕ್ಕನ್ನು ಬದಲಾಯಿಸಬಹುದು ಮತ್ತು ತನಗೆ ಉಪಯುಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ಪ್ರಸ್ತುತ ಜಾಗತಿಕ ಪ್ರಪಂಚದಲ್ಲಿ ವಿವೇಕಯುತವಾಗಿ ಬದುಕಲು ಮತ್ತು ಬದಲಾವಣೆಗೆ ಹೊಂದಿಕೊಳ್ಳುವಂತೆ ಮಾಡಲು ಶಿಕ್ಷಣದ ಪಾತ್ರ ಅತ್ಯಂತ ಮುಖ್ಯವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿಯಿಂದ ಪ್ರಜ್ಞಾವಂತ ಸಮಾಜದ ನಿರ್ಮಾಣವಾಗುತ್ತದೆ. ಈ ಪ್ರಜ್ಞಾವಂತ ಸಮಾಜದ ನಿರ್ಮಾಣವಾಗಬೇಕಾದರೆ ಪ್ರಜ್ಞಾವಂತ ಶಿಕ್ಷಕರಿಗೆ ಅತ್ಯಂತ ಹೆಚ್ಚಿನ ಜವಾಬ್ಧಾರಿಯಿರುತ್ತದೆ. ಈ ಪ್ರಜ್ಞಾವಂತ ಸಮಾಜದಲ್ಲಿ ಮಾನವ ವರ್ತಮಾನ ಕಾಲದಲ್ಲಿ ನಿಂತು ಭವಿಷ್ಯತ್‌ಕಾಲವನ್ನು ಸಂಪದ್ಭರಿತವಾಗಿ ರೂಪಿಸಿಕೊಳ್ಳಲು ಸಹಾಯ ಮಾಡುವ ಶಿಕ್ಷಣ ಉತ್ತಮ ಶಿಕ್ಷಕನಿಂದ ಮಾತ್ರ ಸಾಧ್ಯ. ರಾಷ್ಟ್ರೀಯ ಶಿಕ್ಷಣ ಸಮಿತಿ (1986) ಪ್ರಕಾರ ಯಾವುದೇ ದೇಶದ ಉನ್ನತಿಯು ಅಲ್ಲಿನ ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಕ ಸಮುದಾಯವನ್ನು ಹೆಚ್ಚು ಅವಲಂಬಿಸಿದೆ. ಹೀಗೆ ಶಿಕ್ಷಕನು ಸಂವಹನಕಾರ, ನಾಯಕ, ಸಂಶೋಧಕ, ತತ್ವಜ್ಞಾನಿ, ಆದರ್ಶವ್ಯಕ್ತಿ, ಮಾರ್ಗದರ್ಶಕ ಮುಂತಾಗಿ ವರ್ಣಿಸಿರುವುದನ್ನು ನೋಡಿದಾಗ ಶಿಕ್ಷಕನ ಮಹತ್ವವು ತಿಳಿಯುತ್ತದೆ.

ಒಬ್ಬ ಉತ್ತಮ ಶಿಕ್ಷಕ ಎನ್ನಿಸಿಕೊಳ್ಳಬೇಕಾದರೆ ಅವನು ಉತ್ತಮ ಗುಣಲಕ್ಷಣಗಳನ್ನು ಹೊಂದಿರುವುದು ಅನಿವಾರ್ಯವೆನಿಸುತ್ತದೆ. ಅವುಗಳೆಂದರೆ ಶೀಲ ಸಂಪನ್ನತೆ, ವಿಶ್ವಾಸ, ಸಹನೆ, ಸಹಕಾರ, ಗಾಂಭೀರ್ಯ, ಉತ್ಸಾಹ, ಆತ್ಮವಿಶ್ವಾಸ, ಆತ್ಮ ಸಂಯಮ, ಸರಳತೆ, ನಿಷ್ಪಕ್ಷಪಾತತೆ ಇವೆಲ್ಲವೂ ಮಾನವೀಯ ಲಕ್ಷಣಗಳ

[1] ***ಸಹಾಯಕ ಪ್ರಾಧ್ಯಾಪಕ, ಎಸ್‌ವಿಕೆ ನ್ಯಾಷನಲ್ ಕಾಲೇಜ್ ಆಫ್ ಎಜುಕೇಷನ್, ಶಿವಮೊಗ್ಗ, ಕರ್ನಾಟಕ–577201***

ಉತ್ತಮ ಪಾಂಡಿತ್ಯ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ ವೃತ್ತಿಯಲ್ಲಿ ಅಸ್ಥೆ ಮುಂತಾದ ವೃತ್ತಿ ಲಕ್ಷಣಗಳನ್ನು ಹೊಂದಿರಲೇಬೇಕಾಗುತ್ತದೆ. ಹೀಗೆ ಹಲವು ಲಕ್ಷಣಗಳನ್ನು ಹೊಂದಿರುವ ಶಿಕ್ಷಕನು ಸಮಾಜದ ವಿವಿಧ ಪರಿಸರದಿಂದ ಬಂದಿರುತ್ತಾನೆ. ಕೆಲವು ಸಂದರ್ಭಗಳಲ್ಲಿ ಈ ಎಲ್ಲಾ ಸಾಮರ್ಥ್ಯಗಳನ್ನು ಹೊಂದಿದ್ದರೂ ಅವನು ಉತ್ತಮ ಶಿಕ್ಷಕನೆನಿಸಲಾರ ಕಾರಣ ಅವನ ಮನೋ–ವೈಜ್ಞಾನಿಕ ಅಂಶಗಳಾದ ಭಾವನೆಗಳು ಮತ್ತು ಬುದ್ಧಿಶಕ್ತಿಯ ಕೊರತೆಯೇ ಕಾರಣ. ಹೀಗೆ ಒಬ್ಬ ಶಿಕ್ಷಕರಲ್ಲಿಯೇ ಬೌದ್ಧಿಕ ಮತ್ತು ಭಾವನಾತ್ಮಕ ಅಂಶಗಳ ಬಗ್ಗೆ ಗೊಂದಲಗಳಿದ್ದರೆ ಇನ್ನೂ ನಾಳಿನ ಭವಿಷ್ಯದ ಭವ್ಯ ಪ್ರಜೆಗಳನ್ನು ನಿರ್ಮಿಸಲು ತರಬೇತಿ ಪಡೆಯುತ್ತಿರುವ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯು ಎಷ್ಟರ ಮಟ್ಟಿಗೆ ಪ್ರಮುಖ ಪಾತ್ರ ವಹಿಸುತ್ತವೆಂಬುದನ್ನು ತಿಳಿಯುವುದು ಅವಶ್ಯಕವಾಗಿದೆ.

ಯಾವುದೇ ಒಬ್ಬ ವ್ಯಕ್ತಿ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಜೀವಿಸಬೇಕಾದರೆ ಶಿಕ್ಷಣ ಎಷ್ಟು ಮುಖ್ಯವೋ ಹಾಗೆ ಉತ್ತಮ ಬುದ್ಧಿಶಕ್ತಿ ಹಾಗೂ ಉತ್ತಮ ಭಾವನೆಗಳೂ ಸಹ ಅವಶ್ಯಕವಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕನು ಅತ್ಯಂತ ಜವಾಬ್ದಾರಿಯುತವಾದ ಸ್ಥಾನವನ್ನು ಹೊಂದಿದ್ದು ಭವಿಷ್ಯದ ಭವ್ಯ ಪ್ರಜೆಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊಂದಿದ್ದಾನೆ. ಇವನು ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಮೊದಲು ಅವನು ಬುದ್ಧಿವಂತನಾಗಿದ್ದು ಭಾವನೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹೀಗೆ ಶಿಕ್ಷಕರು ತಮ್ಮ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕಾದರೆ ಅವರಿಗೆ ಉತ್ತಮ ತರಬೇತಿ ದೊರೆಯಬೇಕಾಗುತ್ತದೆ. ಶಿಕ್ಷಕರು ಸೇವಾಪೂರ್ವ ತರಬೇತಿಯ ಸಮಯದಲ್ಲೇ ಇವುಗಳ ಬಗ್ಗೆ ಹೆಚ್ಚಿನ ಅರಿವನ್ನು ಹೊಂದಿದ್ದು ತಮ್ಮ ಭಾವನೆಗಳನ್ನು ನಿಯಂತ್ರಿಸಿಕೊಳ್ಳುವುದನ್ನು ಕಲಿತು ಮತ್ತು ತಮಗಿರುವ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಂಡಾಗ ಮಾತ್ರ ಶಿಕ್ಷಣದ ಸರ್ವತೋಮುಖ ಬೆಳವಣಿಗೆಯ ಜೊತೆಗೆ ಪ್ರಜ್ಞಾವಂತ ಸಮಾಜವನ್ನು ನಿರ್ಮಿಸಲು ಸಹಾಯಕವಾಗುತ್ತದೆ.

**ಬುದ್ಧಿಶಕ್ತಿ**

ಬುದ್ಧಿಶಕ್ತಿ ಎಂಬ ಪದವನ್ನು ದೈನಂದಿನ ಜೀವನದಲ್ಲಿ ಜನಪ್ರಿಯವಾಗಿ ಬಳಸುವುದರ ಜೊತೆಗೆ, ಅದು ಮನೋವಿಜ್ಞಾನ, ಶಿಕ್ಷಣ ಮತ್ತು ಮಕ್ಕಳ ವಿಕಾಸ ಮುಂತಾದ ಕ್ಷೇತ್ರಗಳಲ್ಲಿನ ಸಂಶೋಧಕರ ಗಮನವನ್ನು ಸೆಳೆದಿದೆ. ನಿಘಂಟುಗಳನ್ನು ಅವಲೋಕಿಸಿದಾಗ ಬುದ್ಧಿಶಕ್ತಿ ಎಂಬ ಪದಕ್ಕೆ ವಿಶಾಲವಾದ ಅರ್ಥಗಳನ್ನು ಕಾಣುತ್ತೇವೆ. ತಿಳಿವಳಿಕೆಯ ಸಾಮರ್ಥ್ಯ, ತರ್ಕಿಸುವ ಸಾಮರ್ಥ್ಯ ಮತ್ತು ಗ್ರಹಣ ಸಾಮರ್ಥ್ಯ, ವೇಗವಾಗಿ ಕಲಿಯುವಿಕೆ, ಮಾನಸಿಕ ಜಾಗ್ರತೆ ಸಂಬಂಧಗಳನ್ನು ಗ್ರಹಿಸುವ ಸಾಮರ್ಥ್ಯ ಇತ್ಯಾದಿ. ಸಾಮರ್ಥ್ಯ, ಪ್ರತಿಭೆ, ಅಭಿಕ್ಷಮತೆ, ಪ್ರಾಜ್ಞತೆ, ಜಾಣ್ಮೆ, ಚತುರತೆ ಮುಂತಾದ ಪದಗಳನ್ನು ಬುದ್ಧಿಶಕ್ತಿಗೆ ಸಮಾನಾರ್ಥಕವಾಗಿ ಬಳಸಲಾಗುತ್ತದೆ.

ಬೀನೆ ಮತ್ತು ಸೈಮನ್‌ರವರ ಪ್ರಕಾರ ಉತ್ತಮವಾಗಿ ನಿರ್ಣಯ ಕೈಗೊಳ್ಳುವ ಉತ್ತಮವಾಗಿ ಸನ್ನಿವೇಶವನ್ನು ಗ್ರಹಿಸುವ ಮತ್ತು ಉತ್ತಮನಾಗಿ ತರ್ಕಿಸುವ ವ್ಯಕ್ತಿಯ ಸಾಮರ್ಥ್ಯವೇ ಬುದ್ಧಿಶಕ್ತಿಯಾಗಿದೆ. ಇವರ ಪ್ರಕಾರ ಬುದ್ಧಿಶಕ್ತಿಗೆ ಪ್ರಮುಖವಾಗಿ 4 ಮುಖ್ಯ ಅಂಶಗಳ ಅಗತ್ಯತೆಯಿದೆ.

1. ಉದ್ದೇಶಿತ ಗುರಿ ಅಥವಾ ಗುರಿ ರೂಪಿಸಿಕೊಳ್ಳುವ ಸಾಮರ್ಥ್ಯ ಮತ್ತು ಅದರ ಕಾರ್ಯ ಸಾಧನೆಯೆಡೆಗೆ ಕಾರ್ಯ ಪ್ರವೃತ್ತರಾಗಿರುವುದು.
2. ಮಾರ್ಪಾಟು ಅಥವಾ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾದ ಹೊಂದಾಣಿಕೆ ಮಾಡಿಕೊಳ್ಳುವ ಸಾಮರ್ಥ್ಯ.
3. ಗ್ರಹಿಸುವ ಸಾಮರ್ಥ್ಯ ಅಥವಾ ಸಮಸ್ಯೆಯ ಮೂಲ ಸ್ವರೂಪವನ್ನು ಅರಿತುಕೊಳ್ಳುವ ಸಾಮರ್ಥ್ಯ.
4. ಸ್ವಯಂ ಮೌಲ್ಯಮಾಪನ ಅಥವಾ ಸಮಸ್ಯೆಯನ್ನು ಸರಿಯಾಗಿ ಪರಿಹರಿಸಲು ಸಾಧ್ಯವಾಗುತ್ತದೆಯೇ ಎಂಬುದರ ಅರಿವು.

ಹೋವರ್ಡ್ ಗಾರ್ಡ್‌ನರ್ ರವರ ಪ್ರಕಾರ "ಒಂದು ಅಥವಾ ಹೆಚ್ಚಿನ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಮೌಲ್ಯವುಳ್ಳ ವಸ್ತುಗಳನ್ನು ರೂಪಿಸುವ ಅಥವಾ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಅಥವಾ ಕೌಶಲವೇ ಬುದ್ಧಿಶಕ್ತಿ. ಒಟ್ಟಾರೆಯಾಗಿ ಹೊಸ ಸನ್ನಿವೇಶಗಳೊಂದಿಗೆ ಹೊಂದಾಣಿಕೆ ಹಿಂದಿನ ಅನುಭವಗಳಿಮದ ಕಲಿಯುವಿಕೆ, ಅಮೂರ್ತ ಚಿಂತನೆ, ಉದ್ದೇಶಪೂರ್ವಕ ವರ್ತನೆ, ಸಾಧನೆಗಳ ವಿಪವ್ಯಯ ಮತ್ತು ದಕ್ಷತೆ, ಹಿಂದೆ ಪಡೆದ ಜ್ಞಾನವನ್ನು ಉಳಿಸಿಕೊಳ್ಳುವ ಮತ್ತು ಪುನಃ ಸ್ಮರಣೆ ಮಾಡಿಕೊಳ್ಳುವ ಸಾಧನವಾಗಿದೆ. ಬುದ್ಧಿಶಕ್ತಿಯನ್ನು ಮೂರ್ತ, ಅಮೂರ್ತ, ಸಾಮಾಜಿಕ ಮತ್ತು ಬಹುಮುಖ ಬುದ್ಧಿಶಕ್ತಿ ಎಂಬುದಾಗಿ ವಿಂಗಡಿಸಬಹುದಾಗಿದೆ.

**ಬಹುಮುಖ ಬುದ್ಧಿಶಕ್ತಿ**

ಬಹುಮುಖ ಬುದ್ಧಿಶಕ್ತಿ ಎಂದರೆ ಒಂದು ಅಥವಾ ಹೆಚ್ಚಿನ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಮೌಲ್ಯವುಳ್ಳ ವಸ್ತುಗಳನ್ನು ರೂಪಿಸುವ ಅಥವಾ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವೇ ಬಹುಮುಖ ಬುದ್ಧಿಶಕ್ತಿಯಾಗಿದೆ. ಇದು ಬಹು ಆಯಾಮಗಳಲ್ಲಿ ಕಂಡುಬರುತ್ತದೆ. ಒಬ್ಬ ವಯಕ್ತಿ ಏಕ ಕಾಲದಲ್ಲಿ ಹಲವು ಕೆಲಸಗಳನ್ನು ಮೌಲ್ಯಯುತವಾಗಿ ಮಾಡುತ್ತಾನೆ ಮತ್ತು ಯೋಚಿಸುತ್ತಾನೆ ಹಾಗೂ ಪರಿಸುತ್ತಾನೆ. ಒಂದಕ್ಕಿಂತ ಹೆಚ್ಚಿನ ಸಮಸ್ಯೆಗಳು ಅಥವಾ ಸನ್ನಿವೇಶಗಳನ್ನು ಏಕ ಕಾಲದಲ್ಲಿ ನಿಭಾಯಿಸುವುದು ಬಹುಮುಖ ಬುದ್ಧಿಶಕ್ತಿಯ ಸೂಚಕವಾಗಿದೆ.

**ಬಹುಮುಖ ಬುದ್ಧಿಶಕ್ತಿಯ ಸಿದ್ಧಾಂತ**

**ಹೋವರ್ಡ್ ಗಾರ್ಡ್‌ನರ್ (1983)** ರವರು ಮೂರು ಪ್ರಮುಖ ತತ್ವಗಳನ್ನಾಧರಿಸಿ ಬಹು ಬುದ್ಧಿಶಕ್ತಿಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಅವುಗಳೆಂದರೆ;

- ಬುದ್ಧಿಶಕ್ತಿ ಎಂಬುದು ಒಂದು ಸಾಮರ್ಥ್ಯದಿಂದ ಕೂಡಿರುವುದಿಲ್ಲ ಆದರೆ ಬಹು ಬುದ್ಧಿಶಕ್ತಿಗಳು ಕಂಡುಬರುತ್ತವೆ.

- ಈ ಎಲ್ಲಾ ಬುದ್ಧಿಶಕ್ತಿಗಳು ಒಂದು ಇನ್ನೊಂದರಿಂದ ಸ್ವತಂತ್ರವಾಗಿರುತ್ತವೆ. ಆದರೆ ಒಬ್ಬ ವ್ಯಕ್ತಿ ಒಂದು ರೀತಿಯ ಬುದ್ಧಿಶಕ್ತಿಯಲ್ಲಿ ಉತ್ತಮವಾಗಿದ್ದರೆ, ಇನ್ನೊಂದು ರೀತಿಯ ಬುದ್ಧಿಶಕ್ತಿಯಲ್ಲಿಯೂ ಸಹ ಉತ್ತಮವಾಗಿರುತ್ತಾನೆಂದು ಹೇಳಲು ಸಾಧ್ಯವಿಲ್ಲ.
- ವಿವಿಧ ರೀತಿಯ ಬುದ್ಧಿಶಕ್ತಿಗಳಲ್ಲಿ ಅನ್ಯೂನ್ಯ ಕ್ರಿಯೆಯನ್ನು ಕಾಣಬಹುದು. ಒಂದು ಸಮಸ್ಯೆಗೆ ಪರಿಹಾರ ವಿವಿಧ ರೀತಿಯ ಬುದ್ಧಿಶಕ್ತಿಗಳ ಅನ್ಯೋನ್ಯ ಕ್ರಿಯೆಯಿಂದ ದೊರೆಯಬಹುದು.

ಗಾರ್ಡ್‌ನರ್ ರವರು 8 ರೀತಿಯ ಬುದ್ಧಿಶಕ್ತಿಗಳನ್ನು ಪ್ರತಿಪಾದಿಸಿದ್ದಾರೆ. ಆದರೆ ಎಲ್ಲಾ ವ್ಯಕ್ತಿಗಳಲ್ಲಿ ಈ ಬುದ್ಧಿಶಕ್ತಿಗಳು ಒಂದೇ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಒಂದು ನಿರ್ಧಿಷ್ಟ ಸನ್ನಿವೇಶ ಅಥವಾ ಸಂದರ್ಭದಲ್ಲಿ ಒಂದು ಬುದ್ಧಿಶಕ್ತಿ ಇತರೇ ಬುದ್ಧಿಶಕ್ತಿಗಳಿಗಿಂತ ಪ್ರಧಾನವಾಗಿರುವುದು ಕಂಡುಬರುತ್ತದೆ. ಹೋವರ್ಡ್ ಗಾರ್ಡ್‌ನರ್‌ರವರು 8 ರೀತಿಯ ಬಹುಮುಖ ಬುದ್ಧಿಶಕ್ತಿಗಳನ್ನು ಪ್ರತಿಪಾದಿಸಿದ್ದಾರೆ. ಅವುಗಳೆಂದರೆ;

- **ಭಾಷಾ ಬುದ್ಧಿಶಕ್ತಿ:** ಇದು ಓದುವಿಕೆ, ಬರೆಯುವಿಕೆ, ಆಲಿಸುವಿಕೆ, ಮಾತನಾಡುವಿಕೆ, ಅರಿತುಕೊಳ್ಳುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದೆ. ಕವಿಗಳಲ್ಲಿ ಲೇಖಕರಲ್ಲಿ ಇತರೆಯವರಿಗಿಂತ ಈ ರೀತಿಯ ಸಾಮರ್ಥ್ಯ ಅಥವಾ ಬುದ್ಧಿಶಕ್ತಿಯಿರುತ್ತದೆ ಎಂದಿದ್ದಾರೆ.
- **ತಾರ್ಕಿಕ–ಗಣಿತದ ಬುದ್ಧಿಶಕ್ತಿ:** ಈ ರೀತಿಯ ಬುದ್ಧಿಶಕ್ತಿ ಗಣಿತದ ಸಮಸ್ಯೆ ಬಿಡಿಸುವಲ್ಲಿ ಅಮೂರ್ತ ಚಿಂತನೆ ಮತ್ತು ಸಂಕೇತಗಳ ಬಳಕೆಯ ಸಾಮರ್ಥ್ಯವನ್ನು ಒಳಗೊಳ್ಳುತ್ತದೆ. ವೈಜ್ಞಾನಿಕ ಕಾರ್ಯಾಗಾರಗಳಲ್ಲಿ ಈ ರೀತಿಯ ಬುದ್ಧಿಶಕ್ತಿ ಬೆಳೆಯುತ್ತದೆ ಮತ್ತು ಅಧಿಕಗೊಳ್ಳುತ್ತದೆ ಎಂದು ಹೇಳಿದ್ದಾರೆ.
- **ಅವಕಾಶೀಯ ಸಂಬಂಧದ ಬುದ್ಧಿಶಕ್ತಿ:** ಈ ರೀತಿಯ ಬುದ್ಧಿಶಕ್ತಿ ಅವಕಾಶೀಯ ಸಂಬಂಧಗಳನ್ನು ಕಲ್ಪಿಸಿಕೊಳ್ಳುವಲ್ಲಿ, ಮಾನಸಿಕ ಚಿತ್ರಣಗಳನ್ನು ರೂಪಿಸಿಕೊಳ್ಳುವಿಕೆ, ವರ್ಗಾವಣೆ ಮತ್ತು ಬಳಸಿಕೊಳ್ಳುವಿಕೆಯಲ್ಲಿ ಅಂತರಿಕ್ಷ ಯಾನದಲ್ಲಿ ಕಂಡುಬರುತ್ತದೆ. ನಾವಿಕರು, ಇಂಜಿನಿಯರುಗಳು, ಶಸ್ತ್ರ ಚಿಕಿತ್ಸಾ ತಜ್ಞರು, ವಿಮಾನ ಚಾಲಕರು, ಶಿಲ್ಪಿಗಳು, ಕಲಾವಿದರು ಮುಂತಾದವರಲ್ಲಿ ಈ ರೀತಿಯ ಬುದ್ಧಿಶಕ್ತಿ ಉತ್ತಮವಾಗಿ ಬೆಳವಣಿಗೆಯಾಗಿರುವುದನ್ನು ಕಾಣಬಹುದು.
- **ಸಂಗೀತದ ಬುದ್ಧಿಶಕ್ತಿ:** ಈ ಬುದ್ಧಿಶಕ್ತಿ ಹೊಂದಿರುವ ವ್ಯಕ್ತಿಗಳು ಹಾಡುವಿಕೆಗೆ ಅಗತ್ಯವಾದ ರಾಗ, ತಾಳ ಮತ್ತು ಲಯಗಳು ಸಂಗೀತದ ವಾದ್ಯಗಳನ್ನು ನುಡಿಸುವಿಕೆ, ರಾಗ ಸಂಯೋಜನೆ ಮತ್ತು ಸಂಗೀತದ ಪ್ರಶಂಸೆ ಮುಂತಾದವುಗಳಿಗೆ ಸಂವೇದನಾ ಶೀಲತೆಯನ್ನು ವ್ಯಕ್ತಿಪಡಿಸುತ್ತಾರೆ.
- **ದೈಹಿಕ–ಗತಿ ಸಂವೇದನಾತ್ಮಕ ಬುದ್ಧಿಶಕ್ತಿ:** ಈ ಬುದ್ಧಿಶಕ್ತಿಯು ನಾಟ್ಯ, ಕ್ರೀಡೆ, ಶಸ್ತ್ರಚಿಕಿತ್ಸೆ, ಕರ–ಕುಶಲತೆ ಮುಂತಾದ ಸಮನ್ವಯದಿಂದ ಕೂಡಿದ ಸಂವೇದನಾ ಗತಿಶೀಲನಾ ಚಟುವಟಿಕೆಗಳಿಗೆ ಅಗತ್ಯವಾದ ಕೌಶಲಗಳು ಮತ್ತು ನೈಪುಣ್ಯತೆಯನ್ನು ಹೊಂದಿರುತ್ತದೆ.

- **ಅಂತರ ವ್ಯಕ್ತಿ ಸಂಬಂಧದ ಬುದ್ಧಿಶಕ್ತಿ:** ಇತರರ ಭಾವನೆಗಳು ಪ್ರೇರಣೆಗಳು ಹಾಗೂ ವರ್ತನೆಗಳನ್ನು ಅರ್ಥ ಮಾಡಿಕೊಳ್ಳುವಿಕೆಯನ್ನು ಒಳಗೊಳ್ಳುತ್ತದೆ. ಇಂತಹ ಅಂತರ ವ್ಯಕ್ತಿ ಸಂಬಂಧದ ಸಾಮಾಜಿಕ ಬುದ್ಧಿಶಕ್ತಿ ಶಿಕ್ಷಕರು, ಮನೋತಜ್ಞರು, ರಾಜಕಾರಣಿಗಳು, ವ್ಯಾಪಾರಿಗಳು ಮತ್ತು ಧಾರ್ಮಿಕ ನಾಯಕರುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- **ವ್ಯಕ್ತಿಯಂತರ್ಗತ ಬುದ್ಧಿಶಕ್ತಿ:** ಈ ಬುದ್ಧಿಶಕ್ತಿ ವ್ಯಕ್ತಿ ತನ್ನನ್ನು ತಾನು ಅರ್ಥ ಮಾಡಿಕೊಳ್ಳುವಿಕೆ ಮತ್ತು ಅನನ್ಯತೆಯನ್ನು ರೂಪಿಸಿಕೊಳ್ಳುವಿಕೆಗೆ ಸಂಬಂಧಿಸಿದೆ. ಅಷ್ಟೇ ಅಲ್ಲದೆ ವ್ಯಕ್ತಿ ತನ್ನ ಸಾಮರ್ಥ್ಯವನ್ನು ಅರ್ಥಮಾಡಿಕೊಂಡಾಗ ಮಾತ್ರ ತಾನಂದು ಕೊಂಡಂತಹ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅವನು ತನ್ನ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಬುದ್ಧಿಶಕ್ತಿಯು ತನ್ನನ್ನು ತಾನು ಅರ್ಥ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದೆ.
- **ನೈಸರ್ಗಿಕ ಬುದ್ಧಿಶಕ್ತಿ:** ಹೊರಗಿನ ಪ್ರಪಂಚದಲ್ಲಿರುವ ವ್ಯತ್ಯಾಸಗಳನ್ನು ಗುರುತಿಸುವಿಕೆ ಮತ್ತು ಪರಿಸರದಲ್ಲಿರುವ ಪ್ರಾಣಿ ಹಾಗೂ ಸಸ್ಯ ಪ್ರಬೇದಗಳನ್ನು ಗುರುತಿಸುವ ಸಾಮರ್ಥ್ಯಗಳನ್ನು ಒಳಗೊಳ್ಳುತ್ತದೆ. ನೈಸರ್ಗಿಕ ಬುದ್ಧಿಶಕ್ತಿ ಹೆಚ್ಚಾಗಿ ಬೇಟೆಗಾರರು, ರೈತರು, ಪ್ರವಾಸಿಗರು ಮತ್ತು ಜೀವ ವಿಜ್ಞಾನದ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ.

ಹೀಗೆ ಹೊವರ್ಡ್ ಗಾರ್ಡ್ನರ್ ರವರು ಒಬ್ಬ ವ್ಯಕ್ತಿಯು ವಿವಿಧ ಸಂದರ್ಭಗಳಲ್ಲಿ ಸನ್ನಿವೇಶದಲ್ಲಿ ಯಾವ ಯಾವ ರೀತಿಯ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಬಳಸುತ್ತಾನೆಯೋ ಆ ಸಂದರ್ಭಗಳಲ್ಲಿ ಅವನ ಬುದ್ಧಿಶಕ್ತಿಯ ಒಂದೊಂದು ಅಂಶವು ಪ್ರಧಾನವಾಗಿ ತನ್ನ ಪಾತ್ರ ನಿರ್ವಹಿಸುತ್ತದೆಂದು ಬಹುಮುಖ ಬುದ್ಧಿಶಕ್ತಿಯ ಸಿದ್ಧಾಂತದಲ್ಲಿ ಅತ್ಯಂತ ಸಮರ್ಥವಾಗಿ ಜಾಗರೂಕತೆಯಿಂದ ಚರ್ಚಿಸಿದ್ದಾರೆ. ಇದು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಸಹ ಒಂದಲ್ಲ ಒಂದು ರೀತಿಯಲ್ಲಿ ಅತ್ಯಂತ ಮಹತ್ವವನ್ನು ಪಡೆದುಕೊಂಡಿರುತ್ತದೆ. ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರನ್ನು ತಯಾರಿಸುವ ಮಹತ್ ಕಾರ್ಯದಲ್ಲಿ ತೊಡಗಿಕೊಂಡಿರುವ ಬಿ.ಇಡಿ. ಪ್ರಶಿಕ್ಷಕರಲ್ಲಿ ಈ ಬಹುಮುಖ ಬುದ್ಧಿಶಕ್ತಿಯ ಪಾತ್ರ ಅತ್ಯಂತ ಮಹತ್ವವಾದುದಾಗಿದೆ.

ಪ್ರಶಿಕ್ಷಕರಿಗೆ ಅಥವಾ ಸೇವಾಪೂರ್ವ ಶಿಕ್ಷಕರಿಗೆ ಬಹುಮುಖ ಬುದ್ಧಿಶಕ್ತಿಯು ಅತ್ಯಂತ ಅವಶ್ಯಕ. ಏಕೆಂದರೆ ಬಹುಮುಖ ಬುದ್ದಿಶಕ್ತಿಯ ತಿಳುವಳಿಕೆ ಇರದಿದ್ದರೆ ಇವರು ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳಲ್ಲಿ ಈ ರೀತಿಯ ಬುದ್ಧಿಶಕ್ತಿಯನ್ನು ಬೆಳೆಸುವಲ್ಲಾಗಲೀ ಅಥವಾ ಮಕ್ಕಳಲ್ಲಿರುವ ಬಹುಮುಖ ಬುದ್ಧಿಶಕ್ತಿಯನ್ನು ಗುರುತಿಸುವಲ್ಲಾಗಲೀ ಅಸಮರ್ಥರಾಗುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಯಲ್ಲಿರುವ ಮೈಸೂರು ನಗರದಲ್ಲಿರುವ ಬಿ. ಇಡಿ. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಲ್ಲಿ ಬಹುಮುಖ ಬುದ್ಧಿಶಕ್ತಿಯ ಮಟ್ಟ ಎಷ್ಟರ ಮಟ್ಟಿಗಿದೆ ಎಂಬುದನ್ನು ತಿಳಿಯಲು ಈ ಅಧ್ಯಯನ ಕೈಗೊಳ್ಳಲಾಗಿದೆ.

**ಅಧ್ಯಯನದ ಅಗತ್ಯತೆ ಮತ್ತು ಮಹತ್ವ**

ಪ್ರತಿಯೊಂದು ರಾಷ್ಟ್ರದ ಅಭಿವೃದ್ಧಿಯ ಹಿಂದೆ ಶಿಕ್ಷಣದ ಪಾತ್ರವು ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಆದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಸಂಶೋಧನೆಗಳು ಶಿಕ್ಷಣ ಕ್ಷೇತ್ರದ ಹಾಗೂ ರಾಷ್ಟ್ರದ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕ ವೃತ್ತಿಯು ಅತ್ಯಂತ ಮಹತ್ವದ ಹಾಗೂ ಪವಿತ್ರ ವೃತ್ತಿಯಾಗಿದ್ದು ನಾಳಿನ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪ್ರಸ್ತುತ ವಿಶ್ವದಾದ್ಯಂತ ಪೋಷಕರು ಹಾಗೂ ಶಿಕ್ಷಣ ತಜ್ಞರು ಸಾಂಪ್ರದಾಯಿಕ ಶಿಕ್ಷಣವನ್ನು ಮಕ್ಕಳಿಗೆ ಕೊಡದೇ ಭವಿಷ್ಯದ ಜೀವನ ರೂಪಿಸಿಕೊಳ್ಳಲು ಅಗತ್ಯವಾದ ಶಿಕ್ಷಣವನ್ನು ಕೊಡಲು ಬಯಸಿದ್ದಾರೆ. ಮಕ್ಕಳಿಗೆ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಗಳಿಗೆ ಹೊಸ ವೃತ್ತಿಯನ್ನು ಕೈಗೊಳ್ಳಲು ಅಗತ್ಯವಾದ ಶಿಕ್ಷಣ ನೀಡುವುದು ಮುಖ್ಯವಾಗಿದೆ. ಕುಟುಂಬಗಳಲ್ಲಿ ಸಮುದಾಯದ ವೃತ್ತಿಗಳಲ್ಲಿ ಭಾವನಾತ್ಮಕ ಹೊಂದಾಣಿಕೆಯಿಲ್ಲದಿರುವುದು, ಹತಾಶ ಭಾವನೆ, ಜೀವನದಲ್ಲಿನ ಏರಿಳಿತಗಳು, ಆಕ್ರಮಣ ಪ್ರವೃತ್ತಿ, ಮಾನಸಿಕ ಒತ್ತಡ, ಆತ್ಮಹತ್ಯೆ ಮುಂತಾದವುಗಳು ಹೆಚ್ಚಾಗುತ್ತಾ ಬಂದಿವೆ.

ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಜೀವನವನ್ನು ಸಮರ್ಥವಾಗಿ ನಡೆಸಿಕೊಂಡು ಹೋಗಲು ಮತ್ತು ಅಂತಹ ಸಾಮರ್ಥ್ಯವನ್ನು ಬೆಳೆಸಲು ಅಗತ್ಯವಾದ ಮಾರ್ಗದರ್ಶನದ ಅವಶ್ಯಕತೆಯಿದೆ. ಇದಕ್ಕೆ ಪರಿಹಾರಗೈಯುವ ಸಾಮರ್ಥ್ಯ ಹಾಗೂ ಶಕ್ತಿ ಬಹುಮುಖ ಬುದ್ಧಿಶಕ್ತಿಯಲ್ಲಿದೆ. ಬಹುಮುಖ ಬುದ್ಧಿಶಕ್ತಿಯು ವಿವಿಧ ರೀತಿಯ ಶಾಬ್ದಿಕ, ಸಂಗೀತ, ಭಾಷೆ, ನೈಸರ್ಗಿಕತೆ, ವ್ಯಕ್ತಿಗತ, ತಾರ್ಕಿಕ ಮತ್ತು ಗಣತೀಯ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಅಂಶಗಳನ್ನು ಹೊಂದಿದೆ. ಹೀಗೆ ವಿದ್ಯಾರ್ಥಿಗಳಲ್ಲಿ ಬುದ್ಧಿಶಕ್ತಿಯು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತದೆ.

ಸಮಾಜದಲ್ಲಿ ಶ್ರೇಷ್ಠ ಸ್ಥಾನಮಾನವನ್ನು ಹೊಂದಿರುವ ಭವಿಷ್ಯದ ಭಾವೀ ಪ್ರಜೆಗಳನ್ನು ರೂಪಿಸುವಂತಹ ಶಿಕ್ಷಕನು ತಾನು ತರಬೇತಿ ಪಡೆಯುತ್ತಿರುವ ಹಂತದಲ್ಲಿಯೇ ಬಹುಮುಖ ಬುದ್ಧಿಶಕ್ತಿಯನ್ನು ಹೆಚ್ಚಿನ ರೀತಿಯಲ್ಲಿ ಹೊಂದಿದ್ದಾಗ ಅವನು ಸಮಾಜದಲ್ಲಿ ಉತ್ತಮ ಪ್ರಜೆಗಳನ್ನು ರೂಪಿಸುವುದಷ್ಟೇ ಅಲ್ಲದೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕನಾಗುತ್ತಾನೆ. ಹೀಗೆ ಬಹುಮುಖ ಬುದ್ಧಿಶಕ್ತಿಗಳು ಮೆದುಳಿನ ವಿಭಿನ್ನ ಭಾಗಗಳ ಚಟುವಟಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಬಹುಮುಖ ಬುದ್ಧಿಶಕ್ತಿ ಸೂಚ್ಯಂಕದ ಆಧಾರದ ಮೇಲೆ ಅಳೆಯಬಹುದಾದ ಬೌದ್ಧಿಕ ಸಾಮರ್ಥ್ಯಕ್ಕಿಂತ ಭಿನ್ನವಾಗಿದೆ. ಇದು ಶೈಕ್ಷಣಿಕ ಬುದ್ಧಿಶಕ್ತಿಗೆ ಪೂರಕವಾಗಿ ಸಮಾಜದಲ್ಲಿ ಉತ್ತಮ ಶಿಕ್ಷಕ ರೂಪುಗೊಳ್ಳಲು ಹೇಗೆ ಪ್ರಭಾವ ಬೀರುತ್ತದೆ ಎಂಬುದ್ದನು ತಿಳಿಯುವಲ್ಲಿ ಈ ಅಧ್ಯಯನವು ಸಹಾಯಕವಾಗಿರುವುದರಿಂದ ಈ ಅಧ್ಯಯನವು ಅತ್ಯಂತ ಹೆಚ್ಚು ಮಹತ್ವದ್ದಾಗಿದೆ.

ಶಿಕ್ಷಕ ವೃತ್ತಿಯಲ್ಲಿ ಬಿ.ಇಡಿ. ಪ್ರಶಿಕ್ಷಣಾರ್ಥಿಗಳ ಮೇಲೆ ಮನೋಧೋರಣೆ, ಹೊಂದಾಣಿಕೆ, ಅಭಿಪ್ರೇರಣೆ, ಬೌದ್ಧಿಕ ಮಟ್ಟ, ವಿಷಯ ಪ್ರಭುತ್ವ, ಬೋಧನಾ ಮಾದರಿಗಳು, ಕ್ರಿಯಾಶೀಲತೆ ಇವುಗಳ ಮೇಲೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳನ್ನು ಹೊಂದಿರುವ ಶಿಕ್ಷಕರನ್ನು ರೂಪಿಸುವ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಶಿಕ್ಷಕ ತರಬೇತಿಯನ್ನು ಪಡೆಯುತ್ತಿರುವ

ಪ್ರಶಿಕ್ಷಣಾರ್ಥಿಗಳ ಮೇಲೆ ಬಹುಮುಖ ಬುದ್ಧಿಶಕ್ತಿಯನ್ನು ಕುರಿತಂತೆ ಅತ್ಯಂತ ಕಡಿಮೆ ಅಧ್ಯಯನಗಳು ನಡೆದಿವೆ. ಆದ್ದರಿಂದ ಈ ಅಧ್ಯಯನವು ಪ್ರಶಿಕ್ಷಣ ತರಬೇತಿ ಪಡೆಯುತ್ತಿರುವ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯು ಯಾವ ಮಟ್ಟದಲ್ಲಿದೆ ಎಂಬುದನ್ನು ತಿಳಿದುಕೊಳ್ಳಲು ಅಗತ್ಯವಾಗಿದೆ.

**ಅಧ್ಯಯನದ ಉದ್ದೇಶಗಳು**

- ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯ ಮಟ್ಟವನ್ನು ಅಧ್ಯಯನ ಮಾಡುವುದು.
- ಬಹುಮುಖ ಬುದ್ಧಿಶಕ್ತಿಯಲ್ಲಿ ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರಲ್ಲಿ ವ್ಯತ್ಯಾಸವಿದೆಯೇ ಎಂಬುದನ್ನು ತಿಳಿಯುವುದು.
- ಬಹುಮುಖ ಬುದ್ಧಿಶಕ್ತಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಸೇವಾಪೂರ್ವ ಶಿಕ್ಷಕರಲ್ಲಿ ವ್ಯತ್ಯಾಸವಿದೆಯೇ ಎಂಬುದನ್ನು ತಿಳಿಯುವುದು.

**ಅಧ್ಯಯನದ ಪ್ರಾಕಲ್ಪನೆಗಳು**

ಪ್ರಸ್ತುತ ಅಧ್ಯಯನದಲ್ಲಿ ಉದ್ದೇಶಗಳಿಗೆ ಅನುಗುಣವಾಗಿ ಪ್ರಾಕಲ್ಪನೆಗಳನ್ನು ಈ ಕೆಳಕಂಡಂತೆ ರಚಿಸಬಹುದಾಗಿದೆ.

- ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯಲ್ಲಿ ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ.
- ಬಹುಮುಖ ಬುದ್ಧಿಶಕ್ತಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ಸೇವಾಪೂರ್ವ ಶಿಕ್ಷಕರುಗಳ ನಡುವೆ ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನವು ವಿವರಣಾತ್ಮಕ ಅಧ್ಯಯನವಾಗಿದ್ದು, ಸಮೀಕ್ಷಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಬೇಕಾದ ಮಾಹಿತಿ ಸಂಗ್ರಹಣೆಗೆ ಸಂಶೋಧಕರು ಬಹುಮುಖ ಬುದ್ಧಿಶಕ್ತಿ ಮಾಪನವನ್ನು ಬಳಸಿಕೊಂಡು ಪ್ರತಿದರ್ಶಚಯನ ನಮೂನೆಗಳ ಮೂಲಕ ಮಾಹಿತಿ ಸಂಗ್ರಹಣೆ ಮಾಡಿದ್ದಾರೆ.

**ಸಮಸ್ಯೆಯ ನಿರೂಪಣೆ**

ಪ್ರಸ್ತುತ ಅಧ್ಯಯನವನ್ನು ಮೈಸೂರು ನಗರದ ಬಿ.ಇಡಿ. ಕಾಲೇಜುಗಳ ಪ್ರಶಿಕ್ಷಣಾರ್ಥಿಗಳ ಬಹುಮುಖ ಬುದ್ಧಿಶಕ್ತಿಗಳು ಯಾವ ಮಟ್ಟದಲ್ಲಿದೆ ಎಂಬುದನ್ನು ತಿಳಿಯಲು ಕೈಗೊಂಡಿರುವ ವಿಷಯವನ್ನು ಸಂಶೋಧನಾ ಸಮಸ್ಯೆಯಾಗಿ ಪರಿವರ್ತಿಸಿ ಈ ಕೆಳಕಂಡಂತೆ ನಿರೂಪಿಸಲಾಗಿದೆ. "**ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯ ಒಂದು ಅಧ್ಯಯನ**".

**ಅಧ್ಯಯನದ ಪ್ರತಿದರ್ಶಚಯನ**

ಪ್ರಸ್ತುತ ಅಧ್ಯಯನಕ್ಕೆ ಮೈಸೂರು ನಗರದಲ್ಲಿಯೇ ಇರುವ 3 ಬಿ.ಇಡಿ ಕಾಲೇಜುಗಳನ್ನು ಸ್ಥರೀಕೃತ ಯಾದೃಚ್ಚಿಕ ವಿಧಾನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ 3 ಬಿ.ಇಡಿ ಕಾಲೇಜುಗಳಲ್ಲಿನ 200 ಸೇವಾಪೂರ್ವ ಶಿಕ್ಷಕರನ್ನು ನಿರ್ದಿಷ್ಟ ಉದ್ದೇಶ, ಕಾಲ ಮತ್ತು ಮಿತಿಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ಮುಖ್ಯ ಚಲಕಗಳನ್ನು ಪ್ರತಿನಿಧಿಸುವಂತೆ ಆಯ್ಕೆ ಮಾಡಿಕೊಳ್ಳಲಾಗಿದೆ.

**ಚಲಕಗಳು:** ಸಮಸ್ಯೆಯನ್ನು ಅಧ್ಯಯನ ಮಾಡುವಾಗ ಚಲಕಗಳು ಮುಖ್ಯ ಪಾತ್ರವಹಿಸುತ್ತವೆ. ಪ್ರಸ್ತುತ ಸಂಶೋಧನೆಯ ಮುಖ್ಯ ಚಲಕಗಳೆಂದರೆ

- ಸ್ವತಂತ್ರ ಚಲಕ: ಬಹುಮುಖ ಬುದ್ಧಿಶಕ್ತಿ
- ಅವಲಂಬಿತ ಚಲಕ: ಲಿಂಗ, ಕಾಲೇಜು ವಿಧ (ಸರ್ಕಾರಿ, ಅನುದಾನಿತ, ಅನುದಾನರಹಿತ)

**ಸಂಶೋಧನೆಯಲ್ಲಿ ಬಳಸಿದ ಸಾಧನಗಳು**

ಸಂಶೋಧಕರು ಪ್ರಸ್ತುತ ಅಧ್ಯಯನದಲ್ಲಿ ಬಹುಮುಖ ಬುದ್ಧಿಶಕ್ತಿ ಮಾಪನವನ್ನು ಬಳಸಿದ್ದಾರೆ. ಇದು ಸಂಶೋಧಕರಿಂದಲೆ ರಚಿಸಲ್ಪಟ್ಟಿದೆ. ಇದರ ವಿಶ್ವಾಸನೀಯತೆಯು (Cronbach's Alpha Reliability) 0.896 ಆಗಿದೆ.

**ಮಾಹಿತಿ ಸಂಗ್ರಹಣ ವಿಧಾನ**

ಸಂಶೋಧನಾ ಅಧ್ಯಯನದ ಅತ್ಯಂತ ಪ್ರಮುಖ ಕಾರ್ಯವೆಂದರೆ ಅದು ಮಾಹಿತಿ ಸಂಗ್ರಹಣೆಯ ಕಾರ್ಯವಾಗಿದೆ. ಈ ಅಧ್ಯಯನಕ್ಕೆ ಮಾಹಿತಿ ಸಂಗ್ರಹಿಸುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಮೈಸೂರು ನಗರದಲ್ಲಿರುವ ಮತ್ತು ಸಂಶೋಧನೆಗೆ ಆಯ್ಕೆ ಮಾಡಿಕೊಂಡ 3 ಬಿ.ಇಡಿ ಕಾಲೇಜುಗಳಿಗೂ ತೆರಳಿ ಅಲ್ಲಿನ ಪ್ರಾಂಶುಪಾಲರಿಂದ ಅನುಮತಿ ಪಡೆದು ಸಂಶೋಧನಾ ಮಾಪನ ಮತ್ತು ಉದ್ದೇಶದ ಬಗ್ಗೆ ತಿಳಿಸಿ ಪ್ರಶಿಕ್ಷಣಾರ್ಥಿಗಳಿಂದ ಬಹುಮುಖ ಬುದ್ಧಿಶಕ್ತಿ ಮಾಪನಗಳನ್ನು ನೀಡಿ ಅವರಿಂದ ಮಾಹಿತಿ ಪಡೆಯುವುದರ ಮೂಲಕ ದತ್ತಾಂಶ ಸಂಗ್ರಹಣೆಯ ಕಾರ್ಯವನ್ನು ಯಶಸ್ವಿಗೊಳಿಸಲಾಯಿತು.

**ಅಧ್ಯಯನಕ್ಕೆ ಬಳಸಿದ ಸಂಖ್ಯಾಶಾಸ್ತ್ರೀಯ ವಿಧಾನಗಳು**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ ವಿಶ್ಲೇಷಣೆಗೆ ಸರಾಸರಿ ವಿಶ್ಲೇಷಣೆ, t–ಪರೀಕ್ಷೆ ಮತ್ತು ಒನ್‌ವೇ ಅನೋವ ಎಂಬ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಿಕೊಳ್ಳಲಾಗಿದೆ.

**ಮಾಹಿತಿ ವಿಶ್ಲೇಷಣೆ ಮತ್ತು ಫಲಿತಾಂಶದ ಅರ್ಥೈಸುವಿಕೆ**

ಬಹುಮುಖ ಬುದ್ಧಿಶಕ್ತಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ಅಧ್ಯಯನದ ಉದ್ದೇಶ ಮತ್ತು ಪ್ರಾಕ್‌ಕಲ್ಪನೆಗೆ ಅನುಗುಣವಾಗಿ ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಉದ್ದೇಶ ಸಂಖ್ಯೆ 1: ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯ ಮಟ್ಟವನ್ನು ಅಧ್ಯಯನ ಮಾಡುವುದು. ಉದ್ದೇಶ ಸಂಖ್ಯೆ ಒಂದನ್ನು ಪರೀಕ್ಷಿಸಲು ಸರಾಸರಿ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದ್ದು ಅದರ ಫಲಿತಾಂಶವನ್ನು ಕೋಷ್ಟಕ 1 ರಲ್ಲಿ ತೋರಿಸಲಾಗಿದೆ.

**ಕೋಷ್ಟಕ: 1 ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯ ಮಟ್ಟ**

| ಉಪನ್ಯಾಸಕರು | ಬಹುಮುಖ ಬುದ್ಧಿಶಕ್ತಿಯ ಮಟ್ಟಗಳು | | | ಒಟ್ಟು |
|---|---|---|---|---|
| | ಕಡಿಮೆ ಬಹುಮುಖ ಬುದ್ಧಿಶಕ್ತಿ | ಸರಾಸರಿ/ಸಾಧರಣ ಬಹುಮುಖ ಬುದ್ಧಿಶಕ್ತಿ | ಹೆಚ್ಚು ಬಹುಮುಖ ಬುದ್ಧಿಶಕ್ತಿ | |
| ಆವೃತ್ತಿ | 22 | 135 | 43 | 200 |
| ಶೇಕಡವಾರು | 11.0% | 67.5% | 21.5% | 100 |

ಕೋಷ್ಟಕ 1 ರಲ್ಲಿ ತೋರಿಸುವಂತೆ ದತ್ತಾಂಶ ಸಂಗ್ರಹಿಸಿದ 200 ಬಿ.ಇಡಿ ಪ್ರಶಿಕ್ಷಣಾರ್ಥಿಗಳಲ್ಲಿ ಹೆಚ್ಚಿನದಾಗಿ ಅಂದರೆ 67.5% ಪ್ರಶಿಕ್ಷಣಾರ್ಥಿಗಳು ಸರಾಸರಿ ಬಹುಮುಖ ಬುದ್ಧಿಶಕ್ತಿಯನ್ನು ಹೊಂದಿದ್ದಾರೆ. ಹಾಗೂ 21.5% ರಷ್ಟು ಪ್ರಶಿಕ್ಷಣಾರ್ಥಿಗಳು ಅತಿ ಹೆಚ್ಚು ಬಹುಮುಖ ಬುದ್ಧಿಶಕ್ತಿಯನ್ನು ಹೊಂದಿದ್ದಾರೆ. ಹಾಗೆಯೇ 11.% ರಷ್ಟು ಪ್ರಶಿಕ್ಷಣಾರ್ಥಿಗಳು ಕಡಿಮೆ ಬಹುಮುಖ ಬುದ್ಧಿಶಕ್ತಿಯನ್ನು ಹೊಂದಿದ್ದಾರೆಂಬುದು ತಿಳಿದುಬಂದಿದೆ. ಈ ಶೇಕಡಾವಾರು ಫಲಿತಾಂಶದಿಂದ ಮೈಸೂರು ಜಿಲ್ಲೆಯ ಬಿ.ಇಡಿ. ಕಾಲೇಜುಗಳ ಪ್ರಶಿಕ್ಷಣಾರ್ಥಿಗಳು ಸಾಮಾನ್ಯವಾಗಿ ಸರಾಸರಿ ಬಹುಮುಖ ಬುದ್ಧಿಶಕ್ತಿಯ ಮಟ್ಟವನ್ನು ಹೊಂದಿದ್ದಾರೆಂದು ತಿಳಿದು ಬಂದಿದೆ.

ಪ್ರಾಕ್‌ಕಲ್ಪನೆ ಸಂಖ್ಯೆ 1 ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯಲ್ಲಿ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ. ಪ್ರಾಕಲ್ಪನೆ ಸಂಖ್ಯೆ 01 ನ್ನು ಪರೀಕ್ಷಿಸಲು t ಪರೀಕ್ಷೆಯನ್ನು ಮಾಡಲಾಗಿದ್ದು ಅದರ ಫಲಿತಾಂಶವನ್ನು ಕೋಷ್ಟಕ 2 ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 2: ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರ ನಡುವಿನ ಬಹುಮುಖ ಬುದ್ಧಿಶಕ್ತಿಯ t ಪರೀಕ್ಷೆಯ ಫಲಿತಾಂಶ**

| ಲಿಂಗ | ಒಟ್ಟು | ಸರಾಸರಿ | ಮಾನಕ ವಿಚಲನೆ | ‘t’ ಬೆಲೆ | df | ಲಕ್ಷರ್ಹತಾಮಟ್ಟ |
|---|---|---|---|---|---|---|
| ಪುರುಷ | 100 | 298.34 | 46.208 | 0.945 | 198 | 0.05 |
| ಮಹಿಳೆ | 100 | 305.02 | 53.47 | | | |

ಕೋಷ್ಟಕ 2 ರಲ್ಲಿ ತೋರಿಸಿರುವಂತೆ ದೊರೆತಿರುವ t ಮೌಲ್ಯವು df 198 ಕ್ಕೆ 0.945 ಆಗಿದ್ದು ಇದು t ಟೇಬಲ್ ಬೆಲೆ 1.97 ಕ್ಕಿಂತ ಕಡಿಮೆ ಇದ್ದು 0.05 ಹಂತದಲ್ಲಿ ಲಕ್ಷ್ಯಾರ್ಹವಾಗಿಲ್ಲ. ಆದ್ದರಿಂದ ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರ ನಡುವೆ ಬಹುಮುಖ ಬುದ್ಧಿಶಕ್ತಿಯಲ್ಲಿ ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ ಆದ್ದರಿಂದ ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯಲ್ಲಿ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ ಎಂಬ ಶೂನ್ಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ಪ್ರಾಕಲ್ಪನೆ ಸಂಖ್ಯೆ 02: ಬಹುಮುಖ ಬುದ್ಧಿಶಕ್ತಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಬಿ.ಇಡಿ ಕಾಲೇಜುಗಳ ಸೇವಾಪೂರ್ವ ಶಿಕ್ಷಕರುಗಳ ನಡುವೆ ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ.

ಪ್ರಾಕ್‌ಕಲ್ಪನೆ ಸಂಖ್ಯೆ 02 ನ್ನು ಪರೀಕ್ಷಿಸಲು ಒನ್‌ವೇ ಅನೋವ ಪರೀಕ್ಷೆಯನ್ನು ಮಾಡಲಾಗಿದ್ದು ಅದರ ಫಲಿತಾಂಶವನ್ನು ತಾಲಿಕೆ ಸಂಖ್ಯೆ 3 ರಲ್ಲಿ ತೋರಿಸಲಾಗಿದೆ.

**ಕೋಷ್ಟಕ: 3 ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಬಿ.ಇಡಿ ಕಾಲೇಜುಗಳ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯ ನಡುವಿನ ಒನ್ ವೇ ಅನೋವಾ ಪರೀಕ್ಷೆಯ ಫಲಿತಾಂಶ**

| ಬಹುಮುಖ ಬುದ್ಧಿಶಕ್ತಿ | Sum of Square | df | Mean Square | F –ಮೌಲ್ಯ | Level of significant |
|---|---|---|---|---|---|
| Between Groups | 115519.19 | 2 | 57759.59 | 29.849 | 0.000 |
| Within Groups | 381210.32 | 197 | 1935.07 | | |
| Total | 496729.52 | 199 | | | |

ಕೋಷ್ಟಕ 3 ರಲ್ಲಿ ತೋರಿಸಿರುವಂತೆ ಸರ್ಕಾರಿ, ಸರ್ಕಾರಿ ಅನುದಾನಿತ, ಮತ್ತು ಖಾಸಗಿ ಬಿ. ಇಡಿ ಕಾಲೇಜುಗಳ ಸೇವಾಪೂರ್ವ ಶಿಕ್ಷಕರ ಬಹುಮುಖ ಬುದ್ಧಿಶಕ್ತಿಯ ಬಗೆಗಿನ ವ್ಯತ್ಯಾಸವನ್ನು ಪರೀಕ್ಷಿಸಿದಾಗ ದೊರೆತಿರುವ ಈ ಮೌಲ್ಯವು 29.849 ಆಗಿದ್ದು ಇದು ಜಜಿ 02 ಮತ್ತು 197 ಕ್ಕೆ ಲಕ್ಷ್ಯಾರ್ಹವಾಗಿದ್ದು ಪ್ರಾಕಲ್ಪನೆ ಸಂಖ್ಯೆ ಎರಡಕ್ಕೆ ಅನುಗುಣವಾಗಿ ರಚಿಸಿದ ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಖಾಸಗಿ ಬಿ.ಇಡಿ ಕಾಲೇಜುಗಳ ಸೇವಾಪೂರ್ವ ಶಿಕ್ಷಕರ ನಡುವಿನ ಬಹುಮುಖ ಬುದ್ಧಿಶಕ್ತಿಯಲ್ಲಿ ಯಾವುದೇ ಗಣನೀಯ ವ್ಯತ್ಯಾಸವಿಲ್ಲ ಎಂಬ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದ್ದು ಇದರಲ್ಲಿ ಖಾಸಗೀ ಮತ್ತು ಸರ್ಕಾರಿ ಅನುದಾನಿತ ಬಿ.ಇಡಿ ಕಾಲೇಜುಗಳ ಸೇವಾಪೂರ್ವ ಶಿಕ್ಷಕರುಗಳಿಗಿಂತ ಸರ್ಕಾರಿ ಬಿ. ಇಡಿ. ಕಾಲೇಜಿನ ಸೇವಾಪೂರ್ವ ಶಿಕ್ಷಕರುಗಳು ಹೆಚ್ಚಿನ ಬಹುಮುಖ ಬುದ್ಧಿಶಕ್ತಿ ಹೊಂದಿದ್ದಾರೆ ಎಂಬುದಾಗಿ ತಿಳಿದುಬಂದಿದೆ.

**ಅಧ್ಯಯನದ ಫಲಿತಾಂಶಗಳು:**

- ಸೇವಾಪೂರ್ವ ಶಿಕ್ಷಕರುಗಳ್ಲಿ ಶೇ. 67.5 ರಷ್ಟು ಶಿಕ್ಷಕರುಗಳು ಸಾಧಾರಣ ಹಾಗೂ ಶೇ 21.5 ರಷ್ಟು ಅತ್ಯಂತ ಹೆಚ್ಚು ಮತ್ತು ಕೇವಲ 11% ರಷ್ಟು ಸೇವಾಪೂರ್ವ ಶಿಕ್ಷಕರು ಕಡಿಮೆ ಬಹುಮುಖ ಬುದ್ಧಿಶಕ್ತಿಯನ್ನು ಹೊಂದಿದ್ದಾರೆ.

- ಪುರುಷ ಮತ್ತು ಮಹಿಳಾ ಸೇವಾಪೂರ್ವ ಶಿಕ್ಷಕರುಗಳ ಬಹುಮುಖ ಬುದ್ಧಿಶಕ್ತಿಯಲ್ಲಿ ಗಣನೀಯ ವ್ಯತ್ಯಾಸ ಕಂಡುಬಂದಿಲ್ಲ.

- ಸರ್ಕಾರಿ, ಸರ್ಕಾರಿ ಅನುಧಾನಿತ ಮತ್ತು ಅನುದಾನ ರಹಿತ ಬಿ.ಇಡಿ. ಕಾಲೇಜುಗಳ ಸೇವಾಪೂರ್ವ ಶಿಕ್ಷಕರುಗಳ ಬಹುಮುಖ ಬುದ್ಧಿಶಕ್ತಿಯಲ್ಲಿ ಗಣನೀಯ ವ್ಯತ್ಯಾಸ ಕಂಡುಬಂದಿದ್ದು ಅನುದಾನ ರಹಿತ ಮತ್ತು ಸರ್ಕಾರಿ ಅನುಧಾನಿತ ಕಾಲೇಜಿನ ಸಾವಾಪೂರ್ವ ಶಿಕ್ಷಕರುಗಳಿಗಿಂತ ಸರ್ಕಾರಿ ಬಿ. ಇಡಿ ಕಾಲೇಜಿನ ಸೇವಾಪೂರ್ವ ಶಿಕ್ಷಕರುಗಳು ಹೆಚ್ಚಿನ ಬಹುಮುಖ ಬುದ್ಧಿಶಕ್ತಿಯನ್ನು ಹೊಂದಿದ್ದಾರೆ.

**ಅಧ್ಯಯನದ ಶೈಕ್ಷಣಿಕ ನಿಹಿತಾರ್ಥಗಳು**

- ಬಿ.ಇಡಿ. ಕಾಲೇಜಿನಲ್ಲಿ ಸೇವಾಪೂರ್ವ ಶಿಕ್ಷಕರುಗಳಿಗೆ ಬಹುಮುಖ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಜೀವನ ಕೌಶಲ ಶಿಕ್ಷಣಕ್ಕೆ ಹೆಚ್ಚಿನ ಅವಕಾಶ ನೀಡಬೇಕು ಮತ್ತು ವಿಮರ್ಶಾತ್ಮಕ, ಸೃಜನಾತ್ಮಕ ಆಲೋಚನೆ, ಸಮಸ್ಯಾ ನಿರ್ವಹಣಾ ಕೌಶಲ, ನಿರ್ದಾರ ತೆಗೆದುಕೊಳ್ಳುವಿಕೆ, ಅಂತರ್ ವ್ಯಕ್ತಿ ಸಂಬಂಧದ ನಿಯಂತ್ರಣ ಪರಿಣಾಮಕಾರಿ ಸಂವಹನ, ಒತ್ತಡಗಳ ನಿರ್ವಹಣೆ ಹಾಗೂ ಅನುಭೂತಿ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇವುಗಳಿಗೆ ಅನುಗುಣವಾಗಿ ಸನ್ನಿವೇಶಗಳನ್ನು ಸೃಷ್ಟಿಸಿ ಸೇವಾಪೂರ್ವ ಶಿಕ್ಷಕರುಗಳಿಗೆ ತರಬೇತಿ ನೀಡಬೇಕು.

- ಬಿ.ಇಡಿ. ಕಾಲೇಜುಗಳಲ್ಲಿ ಮಾರ್ಗದರ್ಶನ ಹಾಗೂ ಸಲಹಾ ಸೇವೆಗಳನ್ನು ಒದಗಿಸಿ ಆ ಮೂಲಕ ಸೇವಾಪೂರ್ವ ಶಿಕ್ಷಕರುಗಳು ತಮ್ಮ ಶೈಕ್ಷಣಿಕ, ವೃತ್ತಿಪರ ಹಾಗೂ ವಯುಕ್ತಿಕ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಹಾಗೂ ಪರಿಹರಿಸಿಕೊಂಡು ತಮ್ಮ ಬಹುಮುಖ ಬುದ್ದಿಶಕ್ತಿ ಹೆಚ್ಚಿಸಿಕೊಳ್ಳಲು ನೆರವಾಗಬೇಕು.

- ಸಂಶೋಧನೆಯ ಫಲಿತಾಂಶದ ಪ್ರಕಾರ ಸರ್ಕಾರಿ ಅನುಧಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ಪ್ರಶಿಕ್ಷಣಾರ್ಥಿಗಳಿಗಿಂತ ಸರ್ಕಾರಿ ಬಿ.ಇಡಿ. ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಹೆಚ್ಚಿನ ಬಹುಮುಖ ಬುದ್ಧಿಶಕ್ತಿಯನ್ನು ಹೊಂದಿರುತ್ತಾರೆ. ಆದ್ದರಿಂದ ಇವೆರಡೂ ಕಾಲೇಜುಗಳ ಸೇವಾಪೂರ್ವ ಶಿಕ್ಷಕರುಗಳ ಬಹುಮುಖ ಬುದ್ಧಿಶಕ್ತಿಯನ್ನು ಹೆಚ್ಚಿಸಲು ಭಾಷೆ, ತಾರ್ಕಿಕ, ಸಂಗೀತ, ದೈಹಿಕ ಚಟುವಟಿಕೆ, ಮುಂತಾದ ವಿಷಯಗಳ ಬಗ್ಗೆ ಮತ್ತು ಶಾಲೆಯಲ್ಲಿ ಅವುಗಳ ಮಹತ್ವದ

ಬಗೆಗೆ ತಿಳಿಸಿಕೊಡುವುದರ ಮೂಲಕ ಹಾಗೂ ಪ್ರಾಧ್ಯಾಪಕರುಗಳು ಸಹಪಠ್ಯ ಚಟುವಟಿಕೆಗಳ ಮಖಾಂತರ ನೈಜ ಸನ್ನಿವೇಶಗಳನ್ನು ಸೃಷ್ಟಿಸಿ ನೈಸರ್ಗಿಕ ಬುದ್ಧಿಶಕ್ತಿ, ಸಂಗೀತದ ಬುದ್ಧಿಶಕ್ತಿ, ಭಾಷಾ ಬುದ್ಧಿಶಕ್ತಿ, ಮತ್ತು ಗಣತೀಯ ಬುದ್ಧಿಶಕ್ತಿ ಮುಂತಾದ ಹಲವಾರು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು ಸೇವಾಪೂರ್ವ ಶಿಕ್ಷಕರಿಗೆ ಅವಕಾಶ ನೀಡಬೇಕು ಮತ್ತು ಆಮೂಲಕ ಪ್ರತಿಯೊಬ್ಬರನ್ನೂ ಗುರುತಿಸಿ ಪ್ರೋತ್ಸಾಹಿಸಿ ವ್ಯಕ್ತಿತ್ವ ವಿಕಾಸನಕ್ಕೆ ಸೂಕ್ತ ಅವಕಾಶ ಕಲ್ಪಿಸಿಕೊಡಬೇಕು. ಈ ಮೂಲಕ ಸೇವಾಪೂರ್ವ ಶಿಕ್ಷಕರಲ್ಲಿ ಬಹುಮುಖ ಬುದ್ಧಿಶಕ್ತಿಯನ್ನು ಹೆಚ್ಚಿಸಬಹುದಾಗಿದೆ.

**ಉಪಸಂಹಾರ**

ಪ್ರತಿಯೊಂದು ರಾಷ್ಟ್ರದ ಅಭಿವೃದ್ಧಿಯ ಹಿಂದೆ ಶಿಕ್ಷಣದ ಪಾತ್ರವು ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಆದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಸಂಶೋಧನೆಗಳು ಶಿಕ್ಷಣ ಕ್ಷೇತ್ರದ ಹಾಗೂ ರಾಷ್ಟ್ರದ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕ ವೃತ್ತಿಯು ಅತ್ಯಂತ ಮಹತ್ವದ ಹಾಗೂ ಪವಿತ್ರ ವೃತ್ತಿವಾಗಿದ್ದು ನಾಳಿನ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಒಂದು ಸುಭದ್ರ ಮತ್ತು ಸುರಕ್ಷಿತ ರಾಷ್ಟ್ರದ ನಿರ್ಮಾಣ ಅಲ್ಲಿನ ಶಿಕ್ಷಕರಿಂದ ಉಂಟಾಗುತ್ತದೆ ಎಂಬ ಲೋಕೋಕ್ತಿಯಿರುವಂತೆ ಶಿಕ್ಷಕರು ಸಮಾಜ ನಿರ್ಮಾಣದ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಈ ನಿಟ್ಟಿನಲ್ಲಿ ಸೇವಾಪೂರ್ವ ಶಿಕ್ಷಕರಿಗೆ ಬಹುಮುಖ ಬುದ್ಧಿಶಕ್ತಿಯ ಜ್ಞಾನವು ಅತ್ಯಂತ ಅವಶ್ಯಕವಾಗಿದೆ. ಇವರಿಗೆ ಬಹುಮುಖ ಬುದ್ಧಿಶಕ್ತಿಯ ತಿಳುವಳಿಕೆ ಇರದಿದ್ದರೆ ಇವರು ಶಿಕ್ಷಣದ ಮೇಲೆ ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳಲ್ಲಿ ಈ ರೀತಿಯ ಬುದ್ಧಿಶಕ್ತಿಯನ್ನು ಬೆಳೆಸುವಲ್ಲಾಗಲೀ ಅಥವಾ ಮಕ್ಕಳಲ್ಲಿರುವ ಬಹುಮುಖ ಬುದ್ಧಿಶಕ್ತಿಯನ್ನು ಗುರುತಿಸುವಲ್ಲಾಗಲೀ ಅಸಮರ್ಥರಾಗುತ್ತಾರೆ. ಆದ್ದರಿಂದಾಗಿ ತರಬೇತಿ ಪಡೆಯುತ್ತಿರುವ ಹಂತದಲ್ಲಿಯೇ ಬಹುಮುಖ ಬುದ್ಧಿಶಕ್ತಿಯ ಬಗ್ಗೆ ಹೆಚ್ಚಿನ ಅರಿವು ಪಡೆದು ವೃತ್ತಿಯಲ್ಲಿ ಅದರ ಮಹತ್ವವನ್ನು ಅರಿತಾಗ ಮಾತ್ರ ಅವನು ಸಮಾಜದಲ್ಲಿ ಉತ್ತಮ ಪ್ರಜೆಗಳನ್ನು ರೂಪಿಸುವುದಷ್ಟೇ ಅಲ್ಲದೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕನಾಗುತ್ತಾನೆ.

**ಪರಾಮರ್ಶನಾ ಗ್ರಂಥಗಳು**


- ಸದಾಶಿವಯ್ಯ ಕೆ.ಎಸ್. (1984), **ಕನ್ನಡ ನಡೆದು ಬಂದ ದಾರಿ,** ಮೈಸೂರು, ವಿಶ್ವನಾಧ ಪ್ರಕಾಶನ.
- ಯಶೋಧರ ಕೆ. (2007), **ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ",** ಶಿಬಾ ಪ್ರಕಾಶನ, ಮೈಸೂರು.
- ಬುಚ್ ಎಂ.ಬಿ (1983–88), **ಫೋರ್ತ್ ಸರ್ವೆ ಆಫ್ ರೀಸರ್ಚ್ ಇನ್ ಎಜುಕೇಷನ್"** ನ್ಯೂ ಡೆಲ್ಲಿ Vol- I, NCERT.
- ಬಿಲಕಾರ ಎಂ.ಎಚ್. (2006–07), **ಶೈಕ್ಷಣಿಕ ಸಂಶೋಧನಾ ಪದ್ಧತಿ,** ಗದಗ, ವಿಜೇತ ಪ್ರಕಾಶನ.
- ಗೋವಿಂದರಾವ್ ಎ.ವಿ (1994), **ಸೆಕೆಂಡರಿ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು,** ಚೇತನ್ ಬುಕ್ ಹೌಸ್, ಮೈಸೂರು.
- ಹಸನ್ ಪಾಷಾ ಷರೀಪ್ (2008) ರವರ ವಿದ್ಯಾರ್ಥಿಗಳ ಭಾಗವಹಿಸುವಿಕೆ ಮತ್ತು ಶಾಲಾ ವಿಷಯಗಳನ್ನು ಕುರಿತಂತೆ ಗಾರ್ಡ್‌ನರ್ ರವರ ಬಹು ಬುದ್ಧಿಶಕ್ತಿಯ ಪರಿಚಯ ಕ್ಯಾರ್ಟರ್‌ಲೀ ಜರ್ನಲ್ ಆಫ್ ಎಜುಕೇಷನಲ್ ಇನ್‌ವೆನ್‌ಸನ್ ನಂ. 24, ಸ್ಪ್ರಿಂಗ್ (2008).
- ಅಂತರ್ಜಾಲ: http://www.multipleintelligencelab.com